siri-kannada.in

# (೫) ಅಣ್ಣಿಕಾಪುತ್ರನ ಕಥೆ

ಅಣ್ಣಿಕಾಪುತ್ರನ ಕಥೆಯಂ ಪೇೞ್ವೆಂ:

ಗಾಹೆ || ಣಾವಾಏ ಣಿಬ್ಬುಡಾಏ ಗಂಗಾಮಜ್ಝೇ ಅಮೂಢಮಾಣಮದೀ |
ಆರಾಧಣಂ ಪವಣ್ಣೋ ಕಾಲಗದೊ[1][ಏಣಿಯಾ][1] ಪುತ್ತೋ ||

[ಣಾವಾಏ—ನಾವೆ, ಣಿಬ್ಬುಡಾಏ—ಬ್ಬುಡಾಏಮುಳುಗಿದುದಾದೊಡೆ, ಗಂಗಾಮಜ್ಝೇ—ಗಂಗಾಮಹಾನದಿಯ ನಡುವೆ, ಅಮೂಢಮಾಣಮದೀ—ಮೋಹಿಸದ ಬುದ್ಧಿಯನೊಡೆಯನಾಗಿ, ಆರಾಧಣಂ—[2]ನಿಜಾತ್ಮಾರಾಧನೆಯಂ[2] ಪವಣ್ಣೋ—ಲೇಸಾಗಿ ಪೊರ್ದ್ದಿದೊಂ, ಕಾಲಾಗದೊ—ಕಾಲಂಗೆಯ್ದೊನಾಗಿ, [3][ಏಣಿಯಾ][3] ಪುತ್ತೋ—ಅಣ್ಣಿಕೆಯ ಮಗಂ]

ಅದೆಂತೆಂದೊಡೆ:

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಉತ್ತರ ಮಧುರೆಯೆಂಬುದು ಪೊೞಲದನಾಳ್ವೊಂ ಪ್ರಜಾಪಾಳನೆಂಬೊನರಸನಾತನ ಮಹಾದೇವಿ ಸುಪ್ರಭೆಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊೞಲೊಳ್ ಸಾರ್ಥಾಧಿಪತಿ ಧನದತ್ತನೆಂಬೊಂ ಪರದಂ ಧನಕನಕ ಸಮೃದ್ಧನಾತನ ಭಾರ್ಯೆ ಧನಶ್ರೀಯೆಂಬಾಳಾಯಿರ್ವರ್ಗ್ಗಂ ಮಗಂ ಧನದೇವನೆಂಬೊನಂತವರ್ಗ್ಗಳ್ಗೆ ಸುಖದಿಂ ಕಾಲಂ ಸಲೆ

ಮತ್ತೊಂದು ದಿವಸಂ ಧನದೇವಂ ಪರದಿಂಗೆಂದು ಪಿರಿದುಂ ಸಾರ[2]ಮಪ್ಪ ಭಂಡಮಂ ತೀವಿಕೊಂಡು ಪಿರಿದುಂ ಸಾರ್ಥಂಬೆರಸು ದಕ್ಷಿಣ ಮಧುರೆಗೆ ವೋದೊಡಾ ಪೊೞಲ ರಾಜಶ್ರೇಷ್ಠಿ ತಿಳಕಶ್ರೇಷ್ಠಿಯೆಂಬೊನಾತನ ಭಾರ್ಯೆ ನಂದೆಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಪದ್ಮಾವತಿ[4] ಸುಮತಿ ಗುಣಮತಿಯೆಂತಿವರ್ ಮೊದಲಾಗೊಡೆಯ ಎಣ್ಬರ್ ಪೆಣ್ಗೂಸುಗಳಾದೊ[5]ಡ[5]ವರೊಳಗೆಲ್ಲರಿಂ ಕಿಱಿಯಳಣ್ಣಿಕೆಯೆಂಬೊಳಾಕೆಯಂ ಧನದತ್ತನ ಮಗನಪ್ಪ ಧನದೇವನಂ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಗುಣಂಗಳಿಂ ಕೂಡಿದೊನಂ *ತಿಳಕಶ್ರೇಷ್ಠಿಯುಂ ನಂದೆಯುಂ ಕಂಡಾತಂಗೆ ಬಯಸಿ ಅಣ್ಣಿಕೆಯೆಂಬ ಕೂಸಂ ಕೊಟ್ಟೊಡೆ ಕೆಲವು ದಿವಸಮಾ ಪೊೞಲೊಳಿರ್ದ್ದು ತಮ್ಮ ಕೊಂಡು ಪೋದ ಭಂಡಮಂ ಮಾಱಿ ಪೆಱದಂ ತಮ್ಮ ನಾ[6]ಟ್ಕೆಪೂರ್ವಮಪ್ಪ ಭಂಡಮಂ ತೀವಿಕೊಂಡು ತಮ್ಮ ಪೊೞಲ್ಗುತ್ತರ ಮಧುರೆಗೆ ಬಂದಿರ್ದ್ದರನ್ನೆಗಮಣ್ಣಿಕೆಗೆ ಗರ್ಭಮಾಗಿ ಮಗಂ ಪುಟ್ಟಿದೊಡೆ ಧನದೇವನ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದಣ್ಣಿಕೆಯ ಮಗನೆಂ[7]ದಾತಂ[7]ಗಣ್ಣಿಕಾಪುತ್ರನೆಂದು ಪೆಸರನಿ[8]ಟ್ಟೊಡಾ[8]ತಂ ಕ್ರಮಕ್ರಮದಿಂ ಸುಖದಿಂ [9]ಬ[9]ಳೆದು ನವಯೌವನನಾಗಿ[10]ರ್ಪ್ಪನ್ನೆಗಂ

---

1. ಅಣ್ಣಿಕಾ (ಸ). 2. ದರ್ಶನಜ್ಞಾನಚಾರಿತ್ರಂಗಳಾರಾಧನೆಯಂ (ಘಚಛ). 3. +ಧನ (ಘಚಛ). 3. + ಪ್ರಭಾವತಿ (ಘಚಛ). 5. ರ (ಘಛ). *ಪು ೬೬-೬೯ (ಖ)ದಲ್ಲಿ* ನಷ್ಟವಾಗಿದೆ. 6. ಳ್ಗಳ್ಗೆ ಆ (ಕಗ). 7. ದೊಂಡಾತಂ (ಘಚ), 8. ಟ್ಟರಾ (ಘಚಜ). *ಬೆ (ಕಗಚ). 10. + ಸುಖಮಿ (ಘಚಛ).

siri-kannada.in



ಇತ್ತ [1]ದಮ[1]ಸೂರಿಗಳೆಂಬವರವಧಿಜ್ಞಾನಿಗಳಪ್ಪ ಆಚಾರ್ಯರ್ ಪಿರಿದುಂ ರಿಸಿ ಸಮುದಾಯಂಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರುತ್ತರ ಮಧುರೆಗೆ ಬಂದು ಬಹಿರುದ್ಯಾನ ವನದೊಳಿರ್ದ್ದರನಣ್ಣಿಕಾಪುತ್ರಂ ಪೋಗಿ [2]ವಂದಿಸಿ ಧರ್ಮಮಂ ಕೇಳ್ದು ಸಮ್ಯಕ್ತ್ವ ಪೂರ್ವಕಂ ಶ್ರಾವಕವ್ರತಂಗಳೆಲ್ಲಮುಂ ಕೈಕೊಂಡು ತದನಂತರಮೆ ಭಟಾರಾ ಎನಗಾಯುಷ್ಯವೆನಿ[2]ತೆಂದು ತನ್ನಾಯುಷ್ಯಪ್ರಮಾಣಮಂ ಬೆಸಗೊಂಡೊಡೆ ಭಟಾರರುಂ ಕಿಱಿದೆ ನಿನಗಾಯುಷ್ಯಮೆಂದು ಪೇೞ್ದೊಡೆ ವೈರಾಗ್ಯಪರಾಯಣನಾಗಿ ತಾಯುಂ ತಂದೆಯುಮಂ ನಂಟರುಮಂ ಬಿಡಿಸಿ ನಿಶ್ಶಲ್ಯಂಗೆಯ್ದು [1]ದಮ[1]ಸೂರಿಗಳೆಂಬಾಚಾರ್ಯರ ಪಕ್ಕದೆ ತಪಂಬಟ್ಟು ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳನೊಡಂಬಡಿಸಿ ಏಕವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ [4]ಗ್ರಾಮನಗರಖೇಡಖರ್ವಡಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ[4] ತೀರ್ಥಗಳೆಲ್ಲಮಂ ವಂದಿಸಲ್ಕೆಂದು ಗಂಗಾಮಹಾನದಿಯಂ ಪಾಯ್ದು ಪೋಪ ಬಗೆಯಿಂದಂ ನಾವೆಯನೇಱಿದೊಡದೊಂದುತ್ಪಾತ ವಾತದಿಂದಂ [5]ಗಂಗಾಮಹಾನದಿಯ[5] ನಡುವೆ ಮಡುವಿನೊಳ್ ಭಯಂಕರಮಾಗುತ್ತಿರ್ದ್ದ ತೆರೆ[6]ಯ[6]ನೊಡೆಯದಱೊಳ್[7] ಮುಳುಗಿದೊಡಾ ಅಣ್ಣಿಕಾಪುತ್ರನೆಂಬ ರಿಸಿ ಪಿರಿದಪ್ಪ ಮಹಾತ್ಮ್ಯಮಂ ಮೋಹಿಸದ ಬುದ್ಧಿಯನೊಡೆಯೊಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು [8]ಕಾಯೋ[8]ತ್ಸರ್ಗಂ ನಿಂದು [9]ಧರ್ಮಧ್ಯಾನ[9] ಶುಕ್ಲಧ್ಯಾನಂ[10]ಗಳಂ[10] ಜಾನಿಸಿ ಸಕಳ ಕರ್ಮಂಗಳಂ ಕಿಡಿಸಿ [11]ಅಂತರ್ಗತ[11] ಕೇವಲಿಯಾಗಿ ಮೋಕ್ಷಕ್ಕೆ ಪೋದರ್

ಮತ್ತಂ ಪೆಱರಾರಾಧಕರಪ್ಪವರ್ಗಳೆಲ್ಲಮಣ್ಣಿಕಾಪುತ್ತನೆಂಬ ರಿಸಿಯುಂ ಮನದೊ[12]ಳಿಟ್ಟು [ಟ್ಕಿ][12]ಚೇತನೋಪಸರ್ಗಂ ಮೊದಲಾಗೊಡೆಯ ಉಪಸರ್ಗಂಗಳುಮಂ [13]ನೀರಱಿ ಮೊದಲಾಗೊಡೆಯ ಪರೀಷಹಂಗಳುಮಂ ಸೈರಿಸಿ[14] ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗ[15]ಳಂ ಭವ್ಯರ್ಕಳೆ[15]ಯ್ದುಗೆ

---

1. ದಮದರ (ಘ), ದಮವರ (ಚ), ಯಮಧರ (ಛ). 2. +ಕಂಡು (ಛ). 3. ತುಂಟೆಂದು (ಘಚ). 4. (ಘಚಛ)ಗಳಲ್ಲಿಲ್ಲ. 5. (ಘಚಛ)ಗಳಲ್ಲಿಲ್ಲ. 6. ಗಳ (ಘಚಛ.). 7. + ನಾವೆ (ಘಚ). 8. ಉ (ಕಗ). 9. ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ (ಘಚಛ). 10. ಮ (ಚ). 11. ಅನಂತರಂ (ಘಚಛ). 12. ಳ್ ಬಗೆದ (ಘಚಛ). 13 + ಪಸಿವುಂ (ಘಚಛ). 14. + ಸಮ್ಯಕ್ (ಘಚಛ). 15. ಳನೆ (ಚ).